# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಧಾರವಾಡ

## ವಿಶೇಷ ಎನ್.ಡಿ.ಪಿ.ಎಸ್. ಸಂಖ್ಯೆಃ 8/2023

ಫ್ರಾಸಾ-02

ಚಾಸಾ-01

| | | |
|---|---|---|
| ಸಾಕ್ಷಿಯ ಹೆಸರು | - | ರವಿಚಂದ್ರ ಡಿ. ಬಿ |
| ತಂದೆ ಹೆಸರು | - | ದೇವೇಂದ್ರಪ್ಪ |
| ವಯಸ್ಸು | - | 45 ವರ್ಷ |
| ಉದ್ಯೋಗ | - | ಪಿ ಐ , ಗಾಂಧಿನಗರ ಬಳ್ಳಾರಿ |
| ವಾಸಸ್ಥಳ | - | ಬಳ್ಳಾರಿ |
| ಸತ್ಯ ಪ್ರತಿಜ್ಞೆ ಮೇರೆಗೆ, ದಿನಾಂಕ | - | 12-9-2025 |

**ಮುಖ್ಯ ವಿಚಾರಣೆ ವಿಶೇಷ ಸರ್ಕಾರಿ ಅಭಿಯೋಜಕರಿಂದಃ**

ದಿಃ 16-1-2021 ರಿಂದ ದಿಃ 6-12-2022 ರ ವರೆಗೆ ನಾನು ಪಿ ಐ ಎಂದು ಉಪನಗರ ಪೋಲಿಸಠಾಣೆ ಹುಬ್ಬಳ್ಳಿಯಲ್ಲಿ ಕರ್ತವ್ಯ ನಿರ್ವಹಿಸಿದ್ದೇನೆ. ನಾನು ಅಲ್ಲಿ ಕೆಲಸ ಮಾಡುತ್ತಿದ್ದಾಗ ಚಾಸಾ-5 ರಿಂದ 13 ರವರು ಅಲ್ಲಿ ಸಿಬ್ಬಂದಿಗಳಾಗಿ ಕೆಲಸ ಮಾಡುತ್ತಿದ್ದರು. ( ಅವರ ಹೆಸರುಗಳನ್ನು ಹೇಳಿದ್ದಾರೆ) ಆಗ ಚಾಸಾ-14 ವಿನೋದ ಮುಕ್ತೆದಾರ ಎಸಿಪಿಯಾಗಿ ಕೆಲಸ ಮಾಡುತ್ತಿದ್ದರು.

2. ದಿಃ 4-12-2022 ರಂದು ಬೆಳಿಗ್ಗೆ 10.30 ಘಂಟೆ ಸುಮಾರಿಗೆ ನಾನು ನನ್ನ ಸಿಬ್ಬಂದಿ ಜನರಾದ ಯರಗುಪ್ಪಿ, ಹಾಲವರ , ಕೃಷ್ಣಾ ಹಾಗೂ ಸಿಕ್ಕಲಗಾರ ರವರೊಂದಿಗೆ ರಾಣಿಚೆನ್ನಮ್ಮ ಸರ್ಕಲ ಬಳಿ ಪೆಟ್ರೋಲಿಂಗ್ ನಲ್ಲಿದ್ದಾಗ ಚಾಟಣಿಮಠ ಕ್ರಾಸ ಹತ್ತಿರ ಇಬ್ಬರು ಅನಾಮಧೇಯ ವ್ಯಕ್ತಿಗಳು ತಮ್ಮ ಬಿಳಿ ಕಾರ ಎಮ್ ಎಚ್ 01 ಸಿಎ 6935 ನೇದ್ದರಲ್ಲಿ ಅಕ್ರಮವಾಗಿ ಗಾಂಜಾ ಮಾರಾಟ ಮಾಡುತ್ತಿದ್ದ ಬಗ್ಗೆ ಖಚಿತವಾದ ಬಾತ್ಮಿ ಬಂದಿದ್ದು ನಾನು ಕೂಡಲೇ ಠಾಣೆಗೆ ಹಾಜರಾಗಿ ಗಣಕೀಕೃತ ಪಿರ್ಯಾದು ನೀಡಿದ್ದು ಸದರಿ ಪಿರ್ಯಾದಿಯನ್ನು ಪಿ.ಎಸ್.ಐ ಚಲುವಾದಿಯವರು ಪ್ರಕರಣ ದಾಖಲಿಸಿಕೊಂಡಿರುತ್ತಾರೆ. ನಾನು ಕೊಟ್ಟ ದೂರನ್ನು ಈಗ ನೋಡಿದರೆ ಗುರುತಿಸಬಲ್ಲೆ ಎಂದು ಸಾಕ್ಷಿ ದೂರು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ದೂರನ್ನು ನಿಶಾನೆ ಪಿಃ 23 ಎಂದು ಸಾಕ್ಷಿ ಗುರುತಿಸಿದ ಸಾಕ್ಷಿ

ಸಹಿಯನ್ನು ನಿಶಾನೆ ಪಿಃ 23 (ಎ) ಎಂದು ಗುರುತಿಸಲಾಯಿತು. ನಾವು ದೂರು ಕೊಟ್ಟ ಮೇಲೆ ಚಲುವಾದಿಯವರು ಅದನ್ನು ಕ್ರೈಮ 178/2022 ರಲ್ಲಿ ನೊಂದಣಿ ಮಾಡಿ ಎಫ್.ಐ.ಆರ್ ದಾಖಲಿಸಿ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿರುತ್ತಾರೆ. ನಾನು ಆ ಪ್ರಥಮ ವರ್ತಮಾನ ವರದಿಗೆ ಸಹಿ ಮಾಡಿರುತ್ತೇನೆ. ಸಾಕ್ಷಿ ಆ ಪ್ರಥಮ ವರ್ತಮಾನ ವರದಿ ಮತ್ತು ಅದರಲ್ಲಿರುವ ತನ್ನ ಸಹಿ ನೋಡಿ ಗುರುತಿಸಿರುತ್ತಾರೆ. ಪ್ರಥಮ ವರ್ತಮಾನ ವರದಿಯನ್ನು ನಿಶಾನೆ ಪಿಃ 24 ಎಂದು ಅದರಲ್ಲಿನ ಸಾಕ್ಷಿ ಗುರುತಿಸಿದ ಸಾಕ್ಷಿಯ ಈ-ಸಹಿಯನ್ನು ನಿಶಾನೆ ಪಿಃ 24 (ಎ) ಎಂದು ಗುರುತಿಸಲಾಯಿತು.

3. ನಂತರ ತನಿಖಾಧಿಯವರು ಸಿಬ್ಬಂದಿ ಪಿಸಿ 3030 ಸಿಕ್ಕಲಗಾರ ರವರ ಮುಖಾಂತರ ಸರ್ಕಾರಿ ಪಂಚರಾದ ಚೇತನ ರಾಠೋಡ ,ಗೋಪಾಲ ಎರೂರ ರವರನ್ನು ಹಾಜರುಪಡಿಸಿಕೊಂಡು ಅವರಿಗೆ ಬಾತ್ಮಿ ವಿಷಯ ತಿಳಿಸಿದ್ದು ಅವರೂ ಕೂಡ ಪಂಚರಾಗಿ ಬರಲು ಲಿಖಿತವಾಗಿ ಒಪ್ಪಿಗೆ ನೀಡಿರುತ್ತಾರೆ. ನಂತರ ಸಿಬ್ಬಂದಿಯವರ ಸಹಾಯದಿಂದ ತನಿಖಾಧಿಕಾರಿಯವರು ತೂಕ ಮಾಡುವ ಮಲ್ಲಿಕಾರ್ಜುನ ತುಮ್ಮಿನಕಟ್ಟಿ ರವರನ್ನು ಹಾಜರುಪಡಿಸಿಕೊಂಡಿದ್ದು ಅವರಿಗೂ ಕೂಡ ಬಾತ್ಮಿ ವಿಷಯ ತಿಳಿಸಿದ್ದು ಆತನೂ ಕೂಡ ಲಿಖಿತವಾಗಿ ಒಪ್ಪಿಗೆ ನೀಡಿರುತ್ತಾರೆ.

4. ನಂತರ ನಾವು ಠಾಣೆಯಿಂದ 12.05 ಘಂಟೆಗೆ ಸಿಬ್ಬಂದಿಯವರಾದ ಅಯ್ಯನಗೌಡರ , ಯರಗುಪ್ಪಿ , ಮಂಜುನಾಥ , ಹಾಲವರ , ಕೃಷ್ಣಾ ,ಹಟ್ಟಿ , ಸಿಕ್ಕಲಗಾರ , ಮಾಂಗ ರವರನ್ನು ಹಾಗೂ ಪಂಚರನ್ನು ಮತ್ತು ತೂಕ ಮಾಡುವವರನ್ನು ಕರೆದುಕೊಂಡು ಬಾತ್ಮಿ ಬಂದ ಸ್ಥಳಕ್ಕೆ ತೆರಳಿರುತ್ತೇವೆ. ಬಾತ್ಮಿ ಬಂದ ಸ್ಥಳಕ್ಕೆ ಎಲ್ಲರನ್ನೂ ನಾನು ಕರೆದುಕೊಂಡು ಹೋಗಿದ್ದು ಬಾತ್ಮಿ ಸ್ಥಳವಾದ ಚಾಟ್ನಿ ಮಠ ಕ್ರಾಸ ಹತ್ತಿರ ಬಿಳಿ ಬಣ್ಣದ ಒಂದು ಕಾರು ಎಮ್ ಎಚ್ 01 ಸಿಎ 6935 ಇದ್ದು ನಮ್ಮನ್ನು ನೋಡಿ ಕಾರಲ್ಲಿದ್ದವರು ಅದನ್ನು ಜೋರಾಗಿ ಚಲಾಯಿಸಿಕೊಂಡು ಓಡಲು ಪ್ರಾರಂಭಿಸಿದಾಗ ನಮ್ಮ ಜೀಪ ಚಾಲಕನಿಗೆ ಕಾರನ್ನು ಅಡ್ಡಗಟ್ಟಿ ನಿಲ್ಲಿಸಲು ಸೂಚಿಸಿರುತ್ತೇನೆ. ನಮ್ಮ ಜೀಪ ಚಾಲಕರು ಆ ಕಾರನ್ನು ಅಡ್ಡಗಟ್ಟಿ ನಿಲ್ಲಿಸಿದ್ದು

ಎನ್.ಡಿ.ಪಿ.ಎಸ್. ಸಂಖ್ಯೆ 8/2023

ಫ್ರಾಸಾ-02

ಕಾರನಲ್ಲಿದ್ದ ಇಬ್ಬರು ವ್ಯಕ್ತಿಗಳು ಕಾರಿನಿಂದ ಇಳಿದು ಓಡಹತ್ತಿದಾಗ ನಾವು ಸುತ್ತುವರೆದು ಅವರನ್ನು ಹಿಡಿದಿರುತ್ತೇವೆ. ಆಗ ತನಿಖಾಧಿಕಾರಿಗಳು ಸದರಿ ಇಬ್ಬರಿಗೆ ಅವರಿಗೆ ಬರುವ ಹಿಂದಿ ಭಾಷೆಯಲ್ಲಿ ವಿಚಾರಿಸಿದ್ದು ಅವರು ತಮ್ಮ ಹೆಸರು ಅನಂತ ತಾವರೆ ಹಾಗೂ ನಾಗನಾಥ ಗಾಯಕವಾಡ ಇಬ್ಬರೂ ಮಹಾರಾಷ್ಟ್ರದವರು ಎಂದು ಹೇಳಿರುತ್ತಾರೆ. ಠಾಣೆಯಲ್ಲಿ ಪ್ರಕರಣ ದಾಖಲಾದ ಬಗ್ಗೆ ಅವರಿಗೆ ತಿಳಿಸಿರುತ್ತೇವೆ.

5. ನಂತರ ಎನ್ ಡಿ ಪಿ ಎಸ್ ಕಾಯಿದೆ ಪ್ರಕಾರ ಅವರ ಅಂಗಜಪ್ತಿ ಮಾಡಲು ಪತ್ರಾಂಕಿತ ಅಧಿಕಾರಿಗಳು ಅಥವಾ ಮಾನ್ಯ ನ್ಯಾಯಾಧೀಶರ ಮುಂದೆ ಹಾಜರುಡಿಸಬೇಕೆ ಎಂದು ಆರೋಪಿತರಿಗೆ ಲಿಖಿತವಾಗಿ ಕೇಳಲಾಗಿ ಸದರಿಯವರು ಪತ್ರಾಂಕಿತ ಅಧಿಕಾರಿಗಳ ಮುಂದೆ ಅಂಗ ಶೋಧನೆ ಮಾಡಲು ಒಪ್ಪಿಕೊಂಡಿರುತ್ತಾರೆ. ನಾವು ಲಿಖಿತವಾಗಿ ಕೊಟ್ಟ ಪತ್ರ ಮತ್ತು ಅವರು ಕೊಟ್ಟ ಒಪ್ಪಿಗೆ ಪತ್ರ ಎರಡೂ ಕನ್ನಡ ಭಾಷೆಯಲ್ಲಿದ್ದು , ಅವುಗಳನ್ನು ಅವರಿಗೆ ಬರುವ ಹಿಂದಿ ಭಾಷೆಯಲ್ಲಿ ಓದಿ ಹೇಳಿ ಅವರು ಒಪ್ಪಿಗೆ ನೀಡಿದ ಮೇಲೆ ಸಹಿ ಮಾಡಿರುತ್ತಾರೆ. ನಂತರ ತನಿಖಾಧಿಕಾರಿಯವರು ವಿನೋದ ಮುಕ್ತೆದಾರ ಎಸಿಪಿ ನಾರ್ತ ರವರಿಗೆ ಮನವಿ ಮೂಲಕ ಸ್ಥಳಕ್ಕೆ ಕರೆಸಿಕೊಂಡಿರುತ್ತಾರೆ. ನಂತರ ಎಸಿಪಿ ರವರು ಆರೋಪಿತರಿಗೆ ವಿಚಾರಿಸಿರುತ್ತಾರೆ ಮತ್ತು ಅವರ ಅಂಗ ಶೋಧನೆ ಮಾಡಲಾಗಿ ಆರೋಪಿ ಅನಂತ ತಾವರೆ ಈತನ ಹತ್ತಿರ 600 ರೂ ಹಣ ಮತ್ತು ಒಂದು ನೋಕಿಯಾ ಮೊಬೈಲ ಮತ್ತು ಇನ್ನೊಂದು ಸ್ಯಾಮಸಂಗ್ ಮೊಬೈಲ ದೊರಕಿದ್ದು ಅದನ್ನು ಪ್ರತ್ಯೇಕವಾಗಿ ಲಕೋಟೆಯಲ್ಲಿ ಹಾಕಿ ತನಿಖಾಧಿಕಾರಿ ಮತ್ತು ಪಂಚರ ಸಹಿ ಪಡೆದು ಲೇಬಲ್ ಅಂಟಿಸಿರುತ್ತೇವೆ.

6. ನಂತರ 2 ನೇ ಆರೋಪಿ ನಾಗನಾಥ ಈತನಿಗೆ ಅಂಗ ಶೋಧನೆ ಮಾಡಲಾಗಿ ಈತನ ಹತ್ತಿರ 100 ರೂ ಹಣ ಮತ್ತು ಸ್ಯಾಮಸಂಗ್ ಮೊಬೈಲ ಪೋನ ದೊರಕಿದ್ದು ಅವುಗಳನ್ನು ತನಿಖಾಧಿಕಾರಿಗಳು ತನಿಖಾಧಿಕಾರಿಗಳ ಮತ್ತು ಪಂಚರ ಸಹಿ ಪಡೆದುಕೊಂಡು ಲೇಬಲ್ ಅಂಟಿಸಿರುತ್ತಾರೆ. (ಅವುಗಳನ್ನು

ಈಗಾಗಲೇ ಮುಮಾ-1 ರಿಂದ 5 ಎಂದು ಗುರುತಿಸಲಾಗಿದೆ. )ನಂತರ ಎಸಿಪಿ ರವರು ಕಾರ ಡಿಕ್ಕಿಯನ್ನು ತೆರೆಯುವಂತೆ ಆರೋಪಿತರಿಗೆ ಸೂಚಿಸಿದ್ದು ಆರೋಪಿತರು ಡಿಕ್ಕಿಯನ್ನು ತೆರೆದಿದ್ದು ಅಲ್ಲಿ 3 ಬಂಡಲ್ ಬಾಕ್ಸಗಳು ದೊರಕಿದ್ದು ಅದಕ್ಕೆ ಬ್ರೌನ ಕಲರ್ ಟಕ್ಸೊ ಹಚ್ಚಿದ್ದರು ಅದರ ಮೇಲೆ ತೆಲುಗು ಅಕ್ಷರ ಕೂಡ ಇತ್ತು. ಅದನ್ನು ಓಪನ್ ಮಾಡಿ ನೋಡಲಾಗಿ ಅದರಲ್ಲಿ ಹೂವು, ಕಾಂಡ , ಮೊಗ್ಗು , ಎಲೆಗಳಿರುವ ಗಾಂಜಾ ದೊರಕಿದ್ದು ಗಾಂಜಾದ ಘಾಟು ವಾಸನೆ ಬರುತ್ತಿತ್ತು. ನಂತರ ತೂಕ ಮಾಡುವವರಿಂದ ಅದನ್ನು ತೂಕ ಮಾಡಲಾಗಿ 1 ನೇ ಬಂಡಲನಲ್ಲಿ ಇದ್ದ ಗಾಂಜಾ 4 ಕೆ ಜಿ 610 ಗ್ರಾಂ ಇದ್ದು , 2 ನೇ ಬಂಡಲನ ತೂಕ ಮಾಡಲಾಗಿ ಅದರಲ್ಲಿ 4 ಕೆ ಜಿ 570 ಗ್ರಾಂ ಗಾಂಜಾ ಇತ್ತು. 3 ನೇ ಬಂಡಲನ ತೂಕ ಮಾಡಲಾಗಿ ಅದರಲ್ಲಿ 6 ಕೆ ಜಿ 906 ಗ್ರಾಂ ಗಾಂಜಾ ಇತ್ತು. ಒಟ್ಟು 16 ಕೆ ಜಿ 86 ಗ್ರಾಂ ಗಾಂಜಾ ಇತ್ತು. 3 ಬಾಕ್ಸಗಳನ್ನು ಅನುಕ್ರಮವಾಗಿ ಎ, ಬಿ ಮತ್ತು ಸಿ ಎಂದು ಗುರುತಿಸಲಾಯಿತು. ನಂತರ ಅವುಗಳನ್ನು ಪ್ರತ್ಯೇಕವಾಗಿ ಬಿಳಿ ಬಟ್ಟೆಯಲ್ಲಿ ಸುತ್ತಿ ಅರಗಿನ ಸೀಲನಿಂದ ಎಸ್ ಟಿ ಎಲ್ 8.8 ಎಂಬ ಸೀಲು ಹಾಕಲಾಯಿತು. ನಂತರ ತನಿಖಾಧಿಕಾರಿಯವರ , ಪಂಚರ , ಆರೋಪಿತರ ಮತ್ತು ನನ್ನ ಸಹಿಯನ್ನು ಪಡೆದು ಲೇಬಲಗಳನ್ನು ಪ್ರತ್ಯೇಕವಾಗಿ ಅಂಟಿಸಲಾಯಿತು.

7. ತನಿಖಾಧಿಕಾರಿಯವರು ಆರೋಪಿತರಿಗೆ ಗಾಂಜಾ ಎಲ್ಲಿಂದ ತಂದಿರುವಿರಿ ಎಂದು ಪ್ರಶ್ನಿಸಲಾಗಿ ಅವರು ವಿಶಾಖಾಪಟ್ಟಣದಿಂದ ಬರುವ ಲಾರಿಗಳಿಂದ ಅವುಗಳನ್ನು ಸಂಗ್ರಹಿಸಿಟ್ಟುಕೊಂಡ ಬಗ್ಗೆ ಒಪ್ಪಿಕೊಂಡಿರುತ್ತಾರೆ. ನಂತರ ಈ ಬಗ್ಗೆ ಫೋಟೊಗಳನ್ನು ಕೂಡ ತೆಗೆದಿರುತ್ತಾರೆ. ಸಾಕ್ಷಿ ಆ ಫೋಟೊಗಳನ್ನು ನೋಡಿ ಗುರುತಿಸಿರುತ್ತಾರೆ. ಅವುಗಳನ್ನು ಈಗಾಗಲೇ ನಿಶಾನೆ ಪಿಃ 2 ರಿಂದ 19 ಎಂದು ಗುರುತಿಸಲಾಗಿದೆ. ಅದರಲ್ಲಿರುವ ಸಾಕ್ಷಿ ಗುರುತಿಸಿದ ಸಾಕ್ಷಿಯ ಒಂದು ಫೋಟೊ ನಿಶಾನೆ ಪಿಃ 2 (ಎ) ಎಂದು ಗುರುತಿಸಲಾಯಿತು. ಫೋಟೊಗಳನ್ನು ಕಾರು ಕಂಡುಬಂದಿದ್ದು ಆ ಕಾರನ್ನು ಕೂಡ ತನಿಖಾಧಿಕಾರಿಯವರು ಜಪ್ತು ಮಾಡಿರುತ್ತಾರೆ. ಆ ದಿನ ಕಾರು ಆರೋಪಿತರ ಬಳಿಯೇ ಇತ್ತು ಅವರಿಂದಲೇ ಜಪ್ತು ಮಾಡಿದ್ದಾರೆ. ಆ ದಿನ ತೂಕ ಮಾಡಿದ 3 ಬಂಡಲಗಳನ್ನು ಈಗ ನಾನು ಫೋಟೊಗಳಲ್ಲಿ

ನೋಡುತ್ತಿದ್ದೇನೆ ಎಂದು ಸಂಬಂಧಪಟ್ಟ ಫೋಟೊಗಳನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ. ಈ ಬಗ್ಗೆ ಸ್ಥಳದಲ್ಲಿ ಮಧ್ಯಾಹ್ಞ 12.15 ರಿಂದ 2.15 ರ ವರೆಗೆ ಪಂಚನಾಮೆ ಜರುಗಿಸಿರುತ್ತಾರೆ, ಸಾಕ್ಷಿ ಅದರಲ್ಲಿರುವ ತನ್ನ ಸಹಿ ನೋಡಿ ಗುರುತಿಸಿರುತ್ತಾರೆ. ಪಂಚನಾಮೆಯನ್ನು ಈಗಾಗಲೇ ನಿಶಾನೆ ಪಿಃ 1 ಎಂದು ಗುರುತಿಸಿಲಾಗಿದ್ದು ಅದರಲ್ಲಿ ಸಾಕ್ಷಿ ಗುರುತಿಸಿದ ಸಾಕ್ಷಿ ಸಹಿಯನ್ನು ನಿಶಾನೆ ಪಿಃ 1 (ಬಿ) ಎಂದು ಗುರುತಿಸಲಾಯಿತು.

8. ನಂತರ ಮುದ್ದೆಮಾಲು, ಆರೋಪಿತರೊಂದಿಗೆ ಠಾಣೆಗೆ ಬಂದು ತನಿಖಾಧಿಕಾರಿಗಳು ಮುಂದಿನ ತನಿಖೆ ಮಾಡಿರುತ್ತಾರೆ. ಈ ಎಲ್ಲ ಸಂಗತಿಗಳ ಬಗ್ಗೆ ನಾನು ಐ ಓ ರವರಿಗೆ ಹೇಳಿಕೆ ನೀಡಿರುತ್ತೇನೆ. ಆರೋಪಿಗಳನ್ನು ನೋಡಿದರೆ ಗುರುತಿಸಬಲ್ಲೆ ಎಂದು ಸಾಕ್ಷಿ ನ್ಯಾಯಾಲಯದಲ್ಲಿರುವ ಆರೋಪಿ ಮತ್ತು ವಿಸಿ ಮುಖಾಂತರ ಕಾಣಿಸುತ್ತಿರುವ ಜೆ ಸಿ ಯಲ್ಲಿರುವ ಆರೋಪಿ ಇಬ್ಬರನ್ನೂ ನೋಡಿ ಗುರುತಿಸಿರುತ್ತಾರೆ. ಮುದ್ದೆಮಾಲುಗಳನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ.

**ಪಾಟೀಸವಾಲು ಆರೋಪಿತರ ಪರ ವಕೀಲರಿಂದಃ**

2 ನೇ ಆರೋಪಿ ಪರ ವಕೀಲರು ಈಗಾಗಲೇ ಮಾನ್ಯ ನ್ಯಾಯಾಲಯದಿಂದ ಚಾಸಾ-1 ರಿಂದ 10 ರವರ ಮುಖ್ಯ ವಿಚಾರಣೆಯಾದ ನಂತರ ಒಟ್ಟಿಗೆ ಪಾಟಿ ಸವಾಲು ಮಾಡಲು ಅನುಮತಿ ಪಡೆದಿರುವುದರಿಂದ ಪಾಟಿ ಸವಾಲು ಮುಂದೂಡಲಾಯಿತು.

(ಈ ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಉಕ್ತ ಹೇಳಿಕೆಯ ಮೇರೆಗೆ ಗಣಕೀಕೃತ ಮಾಡಿಸಲಾಯಿತು).

ಓ. ಹೇ. ಕೇ. ಸರಿ ಇದೆ.

**(ಬಿ.ಎಸ್. ಭಾರತಿ )**
ಪ್ರಧಾನ ಜಿಲ್ಲಾ, ಸತ್ರ ಹಾಗೂ ವಿಶೇಷ
ನ್ಯಾಯಾಧೀಶರು, ಧಾರವಾಡ.

<u>ಎನ್.ಡಿ.ಪಿ.ಎಸ್. ಸಂಖ್ಯೆ **8/2023**</u>

<u>ಫ್ರಾಸಾ–**02**</u>

ಫ್ರಾಸಾ–04

ಚಾಸಾ– 07